


ಎಡದಿಂದ ಬಲಕ್ಕೆ:

1. ಪ್ರಾತಃಕಾಲದಿಂದಲೇ ಏಕೋ ಎಲ್ಲವೂ ವಿರುದ್ಧವಾಗಿದೆ (4)
3. ಭರ್ತಿಯಾಗಲು ವಿದ್ಯೆ ಸರಸ್ವತಿಯೇ ಗತಿ (3)
7. ಸಾಕಾಗಲಿಲ್ಲವೇ? ಬಿಸಿ ಬಿಸಿಯ ಸಮಯ (4)
8. ಕೆಂದಾವರೆಯನ್ನು ಅರ್ಪಿಸಿದ್ದು ನಮ್ಮ ರಾಜ್ಯದ್ದೇ 'ಕೇಳಿದ್ದನ್ನು ಕೊಡುವ ನದಿ'(3)
9. ಕಂದಕವನ್ನು ಮುಚ್ಚಲು ಬಾಗಿಲು ಬೇಕೇ? (2)
12. ಜಾರಿ ಹೋಯಿತು ಅಷ್ಟೂ ಬಿಡುವಿನ ದಿನ (2)
14. ವಿದ್ಯಾರ್ಥಿ ಸಮುದಾಯಕ್ಕೆ ಬೀಳ್ಕೊಡುಗೆ (3)
15. ವಿಗ್ರಹ ಕೆತ್ತಿದ ನಂತರ ಮನೆ ಕೆಲಸ (4)
17. ಮಣ್ಣಿನ ಸಂರಕ್ಷಣೆ ಮಾಡಿದ್ದಕ್ಕೆ ಈ ಗೌರವ (3)
18. ವಿದ್ಯಾ ಪರಿಣತಿ ಗಳಿಕೆಗಾಗಿ ವಿನಾಯಕನೇ ಸರಿ (4)

ಮೇಲಿಂದ ಕೆಳಕ್ಕೆ:

1. ಪಾರ್ವತಿಗೆ ಯಾರು ಎದುರು, ವಿರುದ್ಧ? (2)
2. ಕೊಡಲಿಕ್ಕೇ ಹೌದು, ಅದು-ಇದು ಬೆರಕೆ (3)
4. ದಾಸರ ಬಳಿ ಹೇಗೆ ಬರೀ ಕಬ್ಬು? (4)
5. ಕಲಿಯಲು ಬಂದಿರುವ ಎಳೇ ಹುಡುಗನನ್ನು ನೋಡಿದಿರಾ? (3)
6. ಅವರಿಗೆ ಸಾವಿರ ಬಾರಿ ಒದಗಿದೆ ಇಂಥದೇ ಆತುರದ ಸನ್ನಿವೇಶ (4)
10. ದೊಣ್ಣೆ ಹಿಡಿದು ಕಾಯಲಿಕ್ಕೆ ನಿಂತಿದ್ದಾನೆ ಸೇನಾಧಿಪತಿ (4)
11. ಆ ವಿಚಾರವನ್ನ ಬಿಡಿ. ಅದು ಕಿಂಚಿತ್ತೂ ಭಗ್ನವಾಗಿಲ್ಲ (4)
13. ಜಗತ್ತಿನ ಕ್ಷೇಮದ ಬಗೆಗೂ ಎಚ್ಚರವಿರಲಿ (3)
16. ಕಪ್ಪು, ಹಣ ತುಂಬಿಕೊಂಡಿದ್ದಾನೆ ಮಹಾ ಜಿಪುಣ (3)
17. ತಿಮ್ಮನನ್ನು ತಿರುಗಿಸುವುದೇ ಬುದ್ಧಿ. ಹೌದಲ್ವ? (2)

## ಪದಬಂಧ 12-1-12 ಉತ್ತರಗಳು

ಎಡದಿಂದ ಬಲಕ್ಕೆ:

1. ಸ್ವಾಭಾವಿಕ; 3. ಆಸಾಮಿ; 4. ಥಳಕು; 6. ನಿವೇಶನ; 7. ಆದರ; 9. ಆಕರ; 11. ಯತನ (=ಯತ್ನ); 13. ತಿಲಕ; 15. ಕಂದಾಚಾರ; 17. ಕುರೂಪ; 18. ಮದ್ದಾನೆ; 19. ನಜರಾಣಿ.

ಮೇಲಿಂದ ಕೆಳಕ್ಕೆ:

1.ಸ್ವಾಮಿನಿ; 2. ಕಥನ; 3. ಆಸ್ಪದ; 5. ಕುಹಕ; 7. ಆಲಯ; 8. ರಸನ; ಆಣತಿ; 10. ರಜಕ; 12. ತದಕು; 14. ಲಲನೆ; 15. ಕಂಪನ; 16. ರಮಣಿ.

# ವಿಷ-ವಿಸ್ಮಯ

## 'ವಿಷಮಯ ಕಪ್ಪೆ' ಇದೆಯೇ?

ಇದೆ ಒಂದಲ್ಲ, ನೂರಾರು ಪ್ರಭೇದಗಳಿವೆ. ಅವೆಲ್ಲ 'ಪಾಯ್ಸನ್ ಆ್ಯರೋ ಫ್ರಾಗ್ಸ್' ಅಥವಾ 'ಪಾಯ್ಸನ್ ಡಾರ್ಟ್ ಫ್ರಾಗ್ಸ್' ಎಂದೇ ಹೆಸರನ್ನು ಪಡೆದಿವೆ. ಘೋರ ವಿಷಕ್ಕೆ, ಅದನ್ನು ಪ್ರಕಟಿಸುವ ಭಯಂಕರ ರೂಪಕ್ಕೆ ಸುಪ್ರಸಿದ್ಧವಾಗಿವೆ. ಮಧ್ಯ ಅಮೆರಿಕ ಮತ್ತು ದಕ್ಷಿಣ ಅಮೆರಿಕದ ನಿಕರಾಗುವಾ, ಕೋಸ್ಟರಿಕಾ, ಪನಾಮಾ, ಕೊಲಂಬಿಯಾ, ವೆನಿಜುವೆಲ, ಗಯಾನಾ, ಸುರಿನೇಂ, ಫ್ರೆಂಚ್ ಗಯಾನಾ, ಬ್ರೆಜಿಲ್ ಮತ್ತು ಪೆರು ದೇಶಗಳಲ್ಲಿನ ದಟ್ಟ ಮಳೆ ಕಾಡುಗಳು ಈ ಕಪ್ಪೆಗಳ ನೈಸರ್ಗಿಕ ನೆಲೆ. ಈ ಪ್ರದೇಶಗಳ ಅಡವಿ ಜನ ಬಾಣಗಳ ತುದಿಗೋ, ಭರ್ಜಿಗಳ ತುದಿಗೋ, ಈ ಕಪ್ಪೆಗಳ ವಿಷವನ್ನು ತಾಗಿಸಿ ಬೇಟೆಗೆ ಬಳಸುವ ಕ್ರಮ ಕಲಿತಿದ್ದಾರೆ. ಅಂತಹ ಬಾಣ-ಭರ್ಜಿ ಚುಚ್ಚಿದ ಪ್ರಾಣಿಗಳಿಗೆ ಕ್ಷಣಗಳಲ್ಲೇ ಸಾವು ನಿಶ್ಚಿತ.

ಹಾಗೆಂದರೆ ಈ ಕಪ್ಪೆಗಳ ವಿಷ ಬಹಳ ಉಗ್ರ ಎಂಬುದು ಸ್ಪಷ್ಟ. ವಾಸ್ತವ ಏನೆಂದರೆ ಈ ಕಪ್ಪೆಗಳ ಅದರಲ್ಲೂ ಕೆಲ ನಿರ್ದಿಷ್ಟ ಪ್ರಭೇದಗಳ- ವಿಷದ ತೀಕ್ಷ್ಣತೆಯನ್ನು ಬೇರೆ ಯಾವುದೇ ಪ್ರಾಣಿಯ ವಿಷದ ತೀವ್ರತೆಗೂ ಹೋಲಿಸುವುದೂ ಸಾಧ್ಯ ಇಲ್ಲ. ಉದಾಹರಣೆಗೆ ಕೊಲಂಬಿಯಾದ ಅಡವಿಗಳಲ್ಲಿನ ಒಂದು ವಿಷಗಪ್ಪೆ ಪ್ರಭೇದ 'ಫೈಲೋಬೇಟ್ಸ್ ಟೆರಿಬಿಲಿಸ್'ನ ಒಂದೇ ಒಂದು ಗ್ರಾಂನಷ್ಟೇ ವಿಷ ಒಂದು ಲಕ್ಷ ಜನ ಮನುಷ್ಯರ ಪ್ರಾಣ ತೆಗೆಯಬಲ್ಲದು!



ಹಾಗಿದ್ದರೂ ಈವರೆಗೆ ಪತ್ತೆ ಮಾಡಿರುವ 135 ಈ ವಿಷಗಪ್ಪೆ ಪ್ರಭೇಧಗಳೂ ತಾವೇ ಬೇರಾವ ಪ್ರಾಣಿಯ ಮೇಲೂ ಯಾವುದೇ ರೀತಿಯ ದಾಳಿ ನಡೆಸುವುದಿಲ್ಲ. ಹಾಗೆಂದು ಈ ಕಪ್ಪೆಗಳನ್ನು ಹಿಡಿದು ನುಂಗಿ ಯಾವುದೇ ಹಕ್ಕಿ ಹಾವುಗಳು ವಿಷ ತಿಂದು ಸಾಯುತ್ತಲೂ ಇಲ್ಲ. ಅದಕ್ಕೆ ಈ ಕಪ್ಪೆಗಳ ವಿಧ ವಿಧ ಗಾಢ ಬಣ್ಣಗಳ ಚುಕ್ಕಿ ಮಚ್ಚೆ ಪಟ್ಟೆ ಚಿತ್ತಾರಗಳ ಘೋರ ವಿಕಾರ ಚರ್ಮದುಡುಗೆ ಪಡೆದಿವೆ; ಕಂಡೊಡನೆಯೇ ಬೇಟೆಗಾರ ಪ್ರಾಣಿಗಳು ಬೆದರಿ ದೂರ ಹೋಗುತ್ತವೆ.

ವಿಸ್ಮಯ ಏನೆಂದರೆ ಈ ಎಲ್ಲ ಕಪ್ಪೆ ಪ್ರಭೇದಗಳೂ ವಾಮನ ಮೂರ್ತಿಗಳು. ಅತ್ಯಂತ ದೊಡ್ಡ ಗಾತ್ರದವೇ ಎರಡಂಗುಲ ಉದ್ದವನ್ನು, ಹೆಬ್ಬೆರಳ ಗಾತ್ರವನ್ನು ಮೀರುವುದಿಲ್ಲ. ಎಲ್ಲ ಪ್ರಭೇದಗಳಲ್ಲೂ ಅವುಗಳ ವಿಷ ಚರ್ಮದಲ್ಲಿ ವಿಷಗ್ರಂಥಿಗಳಲ್ಲಿ ಸಂಗ್ರಹಗೊಂಡಿದೆ.

ಎಲ್ಲ 'ಆ್ಯರೋ ಪಾಯ್ಸನ್ ಫ್ರಾಗ್'ಗಳ ವಿಷದ ಮೂಲ ಈ ಕಪ್ಪೆಗಳ ಆಹಾರ. ಇವೆಲ್ಲ ಕಪ್ಪೆ ಪ್ರಭೇದಗಳು ವೃಷ್ಟಿವನದ ವಿಷಕರ ಕಟ್ಟಿರುವೆಗಳನ್ನು, ವಿಷ ಕೀಟಗಳಾದ 'ಸ್ಪ್ರಿಂಗ್ ಟೇಲ್'ಗಳನ್ನೂ ತಿನ್ನುತ್ತವೆ. ಆ ಜೀವಿಗಳಲ್ಲಿನ ವಿಷ ಈ ಕಪ್ಪೆಗಳ ಚರ್ಮದಲ್ಲಿ ಶೇಖರವಾಗುತ್ತದೆ. ಹಾಗಾಗಿ ಇವು ವಿಷಗಪ್ಪೆಗಳಾಗಿವೆ.

■ ಎನ್. ವಾಸುದೇವ್